ಬೆಂ.ಮ.ಪ್ರ.ಪ್ರಾ

# ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ
# ಬೆಂಗಳೂರು

## 2020–21ನೇ ಸಾಲಿನ ವಾರ್ಷಿಕ ವರದಿ
## [01–04–2020 ರಿಂದ 31–03–2021 ರವರೆಗೆ]


**ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ**

**ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560052.**

bmrda.karnataka.gov.in

# 2020–2021 (01–04–2020 ರಿಂದ 31–03–2021) ನೇ ಸಾಲಿನ ವರೆಗಿನ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿ

## 1. ಪೀಠಿಕೆ (Introduction):

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರವನ್ನು (ಬಿಎಂಆರ್‌ಡಿಎ) ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಕಾಯ್ದೆ 1985 (ಕರ್ನಾಟಕ ಕಾಯ್ದೆ ಸಂಖ್ಯೆ 39–1985) ರ ಅಡಿಯಲ್ಲಿ ರಚಿಸಲಾಗಿದೆ. ಇದರ ಪ್ರಮುಖ ಉದ್ದೇಶ ಬೆಂಗಳೂರು ಮಹಾನಗರ ಪ್ರದೇಶದಲ್ಲಿ (ಬಿಎಂಆರ್) ವ್ಯವಸ್ಥಿತವಾದ ಬೆಳವಣಿಗೆಗಾಗಿ ಯೋಜನೆಗಳನ್ನು ರೂಪಿಸುವುದು, ಇತರೆ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸುವುದು ಹಾಗೂ ಬಿಎಂಆರ್ ಪ್ರದೇಶದಲ್ಲಿ ಕ್ರಮಬದ್ಧವಾದ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವುದು ಮತ್ತು ಇತರೆ ಅಭಿವೃದ್ಧಿ ಚಟುವಟಿಕೆಗಳನ್ನು ನಿರ್ವಹಿಸುವುದು ಆಗಿರುತ್ತದೆ.

## 2. ಪ್ರಾಧಿಕಾರದ ಕರ್ತವ್ಯಗಳು (Functions of the Authority):

ಬಿಎಂಆರ್‌ಡಿಎ ಅಧಿನಿಯಮದ ಪ್ರಕಾರ ಪ್ರಾಧಿಕಾರಕ್ಕೆ ಭೂಮಿಯನ್ನು ಹೊಂದಲು ಜಮೀನನ್ನು ತನ್ನಲ್ಲಿ ಉಳಿಸಿಕೊಳ್ಳಲು ಹಾಗೂ ಅದನ್ನು ವಿಲೇವಾರಿ ಮಾಡಲು ಹಾಗೂ ಇತರೆ ಸಂಸ್ಥೆಗಳು ಕೂಡ ಕರಾರುಗಳನ್ನು ಮಾಡಿಕೊಳ್ಳಲು ಅವಕಾಶವಿರುತ್ತದೆ (ಕಲಂ.3). ಬಿಎಂಆರ್‌ಡಿಎ ಅಧಿನಿಯಮದ ಕಲಂ–9 ರ ಪ್ರಕಾರ ನಿರ್ವಹಿಸಬೇಕಾದ ಮುಖ್ಯವಾದ ಕಾರ್ಯಗಳು ಈ ಕೆಳಕಂಡಂತಿವೆ.

i. ಬೆಂಗಳೂರು ಮಹಾನಗರ ಪ್ರದೇಶದ ಭೂಮಿಯನ್ನು ಸರ್ವೆ ಮಾಡಿಸುವುದು ಹಾಗೂ ಸರ್ವೆ ವರದಿಯನ್ನು ತಯಾರಿಸುವುದು.

ii. ಬೆಂಗಳೂರು ಮಹಾನಗರ ಪ್ರದೇಶದ ರಚನಾ ನಕ್ಷೆ (Structure Plan) ನ್ನು ತಯಾರಿಸುವುದು.

iii. ರಚನಾ ನಕ್ಷೆಯಲ್ಲಿ ಕಾಣಿಸಲಾದ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು.

iv. ರಚನಾ ನಕ್ಷೆಯ ಪ್ರಕಾರ ಸೂಕ್ತವಾದ ಯೋಜನೆಗಳನ್ನು ರೂಪಿಸುವುದು.

v. ಬೆಂಗಳೂರು ಮಹಾನಗರ ಪ್ರದೇಶದ ಅಭಿವೃದ್ಧಿಗಾಗಿ ನಗರ ಯೋಜನೆಗಳನ್ನು ಕಾರ್ಯಗತ ಮಾಡಲು ಸಮನ್ವಯ ಮಾಡುವುದು.

vi. ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಸಲುವಾಗಿ ಮತ್ತು ಯೋಜನೆಗಳಿಗಾಗಿ ಆರ್ಥಿಕ ವ್ಯವಸ್ಥೆಯನ್ನು ಮಾಡುವುದು ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಯೋಜನೆಗಳನ್ನು ಕಾರ್ಯಗತ ಮಾಡಲು ನೆರವು ನೀಡುವುದು.

vii. ಸರ್ಕಾರವು ನಿಗಧಿಪಡಿಸುವ ಇತರೆ ಕಾರ್ಯಗಳನ್ನು ನಿರ್ವಹಿಸುವುದು ಹಾಗೂ ಪ್ರಾಧಿಕಾರದ ಧ್ಯೇಯೋದ್ದೇಶಗಳನ್ನು ಕಾರ್ಯಗತಗೊಳಿಸುವುದು.

viii. ಸ್ಥಳೀಯ ಸಂಸ್ಥೆಗಳಿಗೆ ಅಭಿವೃದ್ಧಿ ಅಥವಾ ಪ್ಲಾನಿಂಗ್ ಯೋಜನೆಗಳನ್ನು ಕಾರ್ಯಗತಗೊಳಿಸಲು ವಹಿಸುವುದು.

ix. ಬೆಂಗಳೂರು ಮಹಾನಗರ ಪ್ರದೇಶದ ವ್ಯಾಪ್ತಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ), ಕರ್ನಾಟಕ ಕೊಳಚೆ ನಿರ್ಮೂಲನೆ ಮಂಡಳಿ

(ಕೆಎಸ್‌ಸಿಬಿ), ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಬೆಸ್ಕಾಂ), ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ), ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಕೆಎಸ್‌ಆರ್‌ಟಿಸಿ) ಹಾಗೂ ಮತ್ತಿತರೆ ಸಂಸ್ಥೆಗಳು ನಿರ್ವಹಿಸುವ ಅಭಿವೃದ್ಧಿ ಚಟುವಟಿಕೆಗಳನ್ನು ಸಮನ್ವಯಗೊಳಿಸುವುದು.

## 3. ಪ್ರಾಧಿಕಾರದ ರಚನೆ ಹಾಗೂ ಕಾರ್ಯಕಾರಿ ಸಮಿತಿ (Composition of the Authority and its Executive Committee):

ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಈ ಪ್ರಾಧಿಕಾರದ ಅಧ್ಯಕ್ಷರಾಗಿದ್ದು, ನಗರಾಭಿವೃದ್ಧಿ ಸಚಿವರು ಉಪಾಧ್ಯಕ್ಷರಾಗಿರುತ್ತಾರೆ. ಸರ್ಕಾರದ ಕಾರ್ಯದರ್ಶಿಗಳು, ಹಲವು ಇಲಾಖೆಯ ಹಾಗೂ ಸಂಸ್ಥೆಯ ಮುಖ್ಯಸ್ಥರು ಪ್ರಾಧಿಕಾರದ ಸದಸ್ಯರುಗಳಾಗಿರುತ್ತಾರೆ.

ಸರ್ಕಾರವು ಕಾರ್ಮಿಕ ವರ್ಗ, ಮಹಿಳೆ, ಅನುಸೂಚಿತ ಜಾತಿ ಹಾಗೂ ವರ್ಗಗಳಿಂದ ಮತ್ತು ಮಹಾನಗರ ಪ್ರದೇಶದ ವ್ಯಾಪ್ತಿಯಲ್ಲಿ ಆಯ್ಕೆಯಾಗಿರುವ ಶಾಸಕರು ಹಾಗೂ ಸ್ಥಳೀಯ ಸಂಸ್ಥೆಗಳ ಸದಸ್ಯರುಗಳನ್ನು ನೇಮಿಸಲು ಅಧಿನಿಯಮದಲ್ಲಿ ಅವಕಾಶವಿದೆ, ಸದಸ್ಯರುಗಳು ರಾಜೀನಾಮೆ ನೀಡಿದ ಪ್ರಯುಕ್ತ ಹಾಗೂ ಸರ್ಕಾರವು ನೇಮಕ ಮಾಡಿದ ಪ್ರತಿನಿಧಿಗಳನ್ನು ತೆಗೆದುಹಾಕಿದೆ, ಪ್ರಯುಕ್ತ ಜುಲೈ 2005 ರಿಂದ ಈ ಸದಸ್ಯರುಗಳ ಸ್ಥಾನವು ಖಾಲಿಯಿದೆ. ಮಹಾನಗರ ಆಯುಕ್ತರ ಪ್ರಾಧಿಕಾರದ ಪದ ನಿಮಿತ್ತ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.

ಪ್ರಾಧಿಕಾರದ ಕಾರ್ಯಕಾರಿ ಸಮಿತಿಯ ಅಧ್ಯಕ್ಷರು ನಗರಾಭಿವೃದ್ಧಿ ಸಚಿವರಾಗಿದ್ದು, ಮಹಾನಗರ ಆಯುಕ್ತರು ಉಪಾಧ್ಯಕ್ಷರಾಗಿರುತ್ತಾರೆ. ಬೆಂಗಳೂರು ಮಹಾನಗರ ಪಾಲಿಕೆ ಮೇಯರ್ ಹಾಗೂ ಸರ್ಕಾರದ ಸಂಬಂಧಿಸಿದ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು ಮತ್ತು ಇಲಾಖಾ ಮುಖ್ಯಸ್ಥರುಗಳು ಸದಸ್ಯರಾಗಿರುತ್ತಾರೆ.

## 4. ಬೆಂಗಳೂರು ಮಹಾನಗರ ಪ್ರದೇಶದ ವ್ಯಾಪ್ತಿ (Bangalore Metropolitan Region):

ಬೆಂಗಳೂರು ಮಹಾನಗರ ಪ್ರದೇಶವು (ಬಿಎಂಆರ್) ದೇಶದಲ್ಲಿರುವ ಮಹಾನಗರ ಪ್ರದೇಶಗಳಲ್ಲಿ ಒಂದು ದೊಡ್ಡದಾದ ಮಹಾನಗರ ಪ್ರದೇಶವಾಗಿದ್ದು, ವ್ಯಾಪ್ತಿಯಲ್ಲಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳನ್ನು ಒಳಗೊಂಡಿದ್ದು, ಇದು 8005 ಚದರ ಕಿಲೋ ಮೀಟರ್ ಇದ್ದು, ಇದರ ಜನಸಂಖ್ಯೆ 8.42 ಮಿಲಿಯನ್ (2011ರ ಜನಗಣತಿ ಪ್ರಕಾರ) ಇರುತ್ತದೆ.

## 5. ಪರಿಷ್ಕೃತ ರಚನಾ ನಕ್ಷೆ-2031:

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ತಯಾರಿಸಲಾಗಿರುವ ಬೆಂಗಳೂರು ಮಹಾನಗರ ಪ್ರದೇಶದ ಅಂತಿಮ 'ಪರಿಷ್ಕೃತ ರಚನಾ ನಕ್ಷೆ–2031'ಯನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ/149/ಬಿಎಂಆರ್/2014 ದಿನಾಂಕ: 08.05.2017 ರಲ್ಲಿ ಅನುಮೋದಿಸಲಾಗಿರುತ್ತದೆ.

## 6. ಸಮಗ್ರ ಸಂಚಾರ ಮತ್ತು ಸಾರಿಗೆ ಅಧ್ಯಯನ:

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ 15ನೇ ಸಭೆಯ ವಿಷಯ ಸಂಖ್ಯೆ: 15:15ರ ನಡವಳಿಯಲ್ಲಿ ಅನುಮೋದಿಸಲಾಗಿದ್ದ, ಬೆಂಗಳೂರು ಮಹಾನಗರ ಪ್ರದೇಶದಲ್ಲಿ ಪ್ರಯಾಣಿಕರ, ಸರಕು ಸಾಗಣೆ ಮತ್ತು ಸಾರಿಗೆ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಕುರಿತು ಕೈಗೊಂಡಿದ್ದ 'ಸಮಗ್ರ ಸಂಚಾರ ಮತ್ತು ಸಾರಿಗೆ ಅಧ್ಯಯನ'ವನ್ನು ದಿನಾಂಕ: 8.1.2016ರಲ್ಲಿ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ.

## 7. ಬೆಂಗಳೂರು ಮಹಾನಗರ ಪ್ರದೇಶ ವ್ಯಾಪ್ತಿಯಲ್ಲಿ ಉದ್ದೇಶಿತ ಉಪನಗರ ವರ್ತುಲ ರಸ್ತೆ (STRR) ಯ ಅಭಿವೃದ್ಧಿ:

ಬೆಂಗಳೂರು ನಗರದ ಸಂಚಾರ ದಟ್ಟಣೆ ಹಾಗೂ ಜನಸಾಂದ್ರತೆ ಕಡಿಮೆ ಮಾಡುವ ಉದ್ದೇಶದಿಂದ ಅನುಮೋದಿತ ರಚನಾ ನಕ್ಷೆ–2011ರಲ್ಲಿ STRR, IRR, RR ಮತ್ತು ITRR ರಸ್ತೆಗಳ ಪರಿಕಲ್ಪನೆ ಮಾಡಲಾಗಿತ್ತು. ಉದ್ದೇಶಿತ ಉಪನಗರ

ವರ್ತುಲ ರಸ್ತೆ (STRR) ಯ ಉದ್ದ 204 ಕಿ.ಮೀ. ಇದ್ದು, ಬೆಂಗಳೂರು ಮಹಾನಗರ ಪ್ರದೇಶದಲ್ಲಿನ ಮುಖ್ಯ ಪಟ್ಟಣಗಳಾದ ಡಾಬಸ್‌ಪೇಟೆ, ದೊಡ್ಡಬಳ್ಳಾಪುರ, ದೇವನಹಳ್ಳಿ, ಸೂಲಿಬೆಲೆ, ಹೊಸಕೋಟೆ, ಸರ್ಜಾಪುರ, ಅತ್ತಿಬೆಲೆ, ಆನೇಕಲ್, ತಟ್ಟೆಕೆರೆ, ಕನಕಪುರ, ರಾಮನಗರ ಮತ್ತು ಮಾಗಡಿಗಳನ್ನು ಸಂಪರ್ಕಿಸುತ್ತದೆ. ಪ್ರತ್ಯೇಕ ನಗರ ವರ್ತುಲ ರಸ್ತೆ (ITRR) ಗಳ ಉದ್ದ: 163 ಕಿ.ಮೀ. ಇದ್ದು, ಬೆಂಗಳೂರು ಮಹಾನಗರ ಪ್ರದೇಶದಲ್ಲಿನ ಮುಖ್ಯ ಪಟ್ಟಣಗಳಾದ ಕನಕಪುರ, ರಾಮನಗರ, ಮಾಗಡಿ, ನೆಲಮಂಗಲ, ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ ಮತ್ತು ಆನೇಕಲ್‌ಗಳಿಗೆ ಬೈ-ಪಾಸ್ ರಸ್ತೆಗಳಾಗಿ STRR ರಸ್ತೆಗೆ ಸಂಪರ್ಕ ಕಲ್ಪಿಸುತ್ತವೆ.

ದಿನಾಂಕ: 29.12.2015ರಂದು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ 15ನೇ ಸಭೆಯ ವಿಷಯ ಸಂಖ್ಯೆ: 15.4ರ ನಡವಳಿಯಲ್ಲಿ ಉದ್ದೇಶಿತ STRR ಮತ್ತು ITRR ರಸ್ತೆಗಳನ್ನು Development Plan & Town Planning Scheme ಆಧಾರದಲ್ಲಿ ಕಾರ್ಯಗತಗೊಳಿಸಲು ತೀರ್ಮಾನಿಸಲಾಗಿರುತ್ತದೆ.

ಉಪನಗರ ವರ್ತುಲ ರಸ್ತೆ (STRR) ಸ್ಥಳೀಯ ಯೋಜನಾ ಪ್ರದೇಶವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯಿದೆ, 1961ರ ಕಲಂ-4(ಎ)ರ ಅಡಿಯಲ್ಲಿ ದಿನಾಂಕ: 24.06.2016ರಲ್ಲಿ ಅಧಿಸೂಚಿಸಲಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯಿದೆ, 1961ರ ಕಲಂ-4(ಸಿ)ರ ಅಡಿಯಲ್ಲಿ ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರವನ್ನು ದಿನಾಂಕ: 21.10.2016 ರಂದು ರಚಿಸಲಾಗಿರುತ್ತದೆ.

ಸ್ಥಳೀಯ ಯೋಜನಾ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 10ರ ಅಡಿಯಲ್ಲಿ 'ಮಹಾಯೋಜನೆ ತಯಾರಿಕೆಯ ಇಚ್ಛೆಯನ್ನು ಹೊಂದಿರುವ ಬಗ್ಗೆ' "ಪ್ರಜಾವಾಣಿ" ಮತ್ತು "ದಿ ಹಿಂದೂ" ದಿನಪತ್ರಿಕೆಗಳ ದಿನಾಂಕ: 17.11.2016ರ ಸಂಚಿಕೆಗಳಲ್ಲಿ ಹಾಗೂ ದಿನಾಂಕ: 08.12.2016ರ ಕರ್ನಾಟಕ ರಾಜ್ಯಪತ್ರದಲ್ಲಿ 60 ದಿನಗಳ ಕಾಲಾವಧಿ ನೀಡಿ ಸಾರ್ವಜನಿಕ ಸಲಹೆಗಳನ್ನು ಆಹ್ವಾನಿಸಿ, ಪ್ರಕಟಣೆಯನ್ನು ನೀಡಲಾಗಿರುತ್ತದೆ. ಮಹಾಯೋಜನೆ ತಯಾರಿಸಲು ಅರ್ಹ ಸಮಾಲೋಚಕರ ಆಯ್ಕೆಗಾಗಿ ಇ-ಪ್ರೊಕ್ಯುರ್‌ಮೆಂಟ್‌ನಲ್ಲಿ ಟೆಂಡರ್ ಪ್ರಕ್ರಿಯೆಯನ್ನು 'ಟೆಕ್ಸಾಕ್' ಸಂಸ್ಥೆಯ ಮೂಲಕ ಕೈಗೊಳ್ಳಲಾಗಿದ್ದು, M/s WAPCOS Ltd ಇವರಿಗೆ ಉಪನಗರ ವರ್ತುಲ ರಸ್ತೆ (STRR) ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ ತಯಾರಿಕೆ ಕಾರ್ಯದ ಕಾರ್ಯಾದೇಶವನ್ನು ದಿನಾಂಕ : 16.05.2018 ರಂದು ನೀಡಲಾಗಿದೆ.

ಉಪನಗರ ವರ್ತುಲ ರಸ್ತೆ (STRR) ಸ್ಥಳೀಯ ಯೋಜನಾ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ-(5)ರನ್ವಯ ದಿನಾಂಕ: 20.10.2018ನ್ನು ಹಾಲಿ ಭೂಉಪಯೋಗ ನಿರ್ಧರಣಾ ದಿನಾಂಕವೆಂದು ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/73/ಬಿಎಂಆರ್/2019 ದಿನಾಂಕ: 12.12.2019ರಲ್ಲಿ ಘೋಷಿಸಲಾಗಿದೆ. ಸ್ಥಳೀಯ ಯೋಜನಾ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ-(6)ರನ್ವಯ ಹಾಲಿ ಭೂಉಪಯೋಗ ನಕ್ಷೆ ತಯಾರಿಸಲಾಗಿದ್ದು, ಅದನ್ನು ದಿನಾಂಕ: 17.12.2019ರಂದು ಯೋಜನಾ ಪ್ರಾಧಿಕಾರದ ಕಛೇರಿಯ ಸೂಚನಾಫಲಕದಲ್ಲಿ ಸಾರ್ವಜನಿಕರಿಂದ ದಾಖಲಿಸಲಾದ ಹಾಲಿ ಭೂಉಪಯೋಗಗಳಿಗೆ ತಿದ್ದುಪಡಿಗಳಿದ್ದಲ್ಲಿ ತಿಳುಸುವಂತೆ ಕೋರಿ ಪ್ರಕಟಿಸಲಾಗಿತ್ತು. ಆದರೆ, ಈ ಕುರಿತು ಯಾವುದೇ ಸಲಹೆಗಳು ಸ್ವೀಕೃತವಾಗಿರುವುದಿಲ್ಲ. ಮುಂದುವರೆದು, ಪ್ರಸ್ತಾಪಿತ ಭೂಉಪಯೋಗ ನಕ್ಷೆಗಳ ತಯಾರಿಕೆ ಕಾರ್ಯ ಪ್ರಗತಿಯಲ್ಲಿ ಇರುತ್ತದೆ.

## 8. ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ:

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವತಿಯಿಂದ 'Work-Play-Home' ನೀತಿಯನ್ನು ಆಧಾರವನ್ನಾಗಿಟ್ಟುಕೊಂಡು ಕೆಳಕಂಡ ಐದು ಹೊಸ ಸಮಗ್ರ ಉಪನಗರಗಳನ್ನು ನಿರ್ಮಿಸಲು ಉದ್ದೇಶಿಸಲಾಗಿತ್ತು. ಈ ಉಪನಗರ ಯೋಜನೆಗಳಿಗೆ ಸರ್ಕಾರದ ಆದೇಶ ಸಂಖ್ಯೆ: ನಅಇ/97/ಬಿಎಂಆರ್/2006 ದಿನಾಂಕ: 18–10–2006 ರಲ್ಲಿ ತಾತ್ವಿಕ ಅನುಮೋದನೆಯನ್ನು ನೀಡಲಾಗಿತ್ತು.

1) ಬಿಡದಿ ಸಮಗ್ರ ಉಪನಗರ (ರಾಮನಗರ ತಾಲ್ಲೂಕು),
2) ರಾಮನಗರ ಸಮಗ್ರ ಉಪನಗರ (ರಾಮನಗರ ತಾಲ್ಲೂಕು),
3) ಸಾತನೂರು ಸಮಗ್ರ ಉಪನಗರ (ಕನಕಪುರ ತಾಲ್ಲೂಕು),
4) ಸೋಲೂರು ಸಮಗ್ರ ಉಪನಗರ (ಮಾಗಡಿ ತಾಲ್ಲೂಕು),
5) ನಂದಗುಡಿ ಸಮಗ್ರ ಉಪನಗರ (ಹೊಸಕೋಟೆ ತಾಲ್ಲೂಕು).

ಈ ಐದು ಉಪನಗರಗಳ ಪೈಕಿ ಪ್ರಾಯೋಗಿಕವಾಗಿ ಬಿಡದಿ ಸಮಗ್ರ ಉಪನಗರವನ್ನು ಕೈಗೆತ್ತಿಕೊಳ್ಳಲಾಗಿತ್ತು. ಈ ಯೋಜನೆಯನ್ನು ಖಾಸಗಿ ಸಹಭಾಗಿತ್ವದ ಮತ್ತು ಜಾಗತಿಕ ಬಿಡ್‌ಗಳ ಮುಖೇನ ಕೈಗೆತ್ತಿಕೊಳ್ಳುವಂತೆ ಆದೇಶವಾಗಿತ್ತು. ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿಯ 10 ಗ್ರಾಮಗಳಲ್ಲಿ 9178 ಎಕರೆ ಜಮೀನನ್ನು ಬಿಡದಿ ಉಪನಗರ ಯೋಜನೆಗಾಗಿ ಭೂ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿತ್ತು.

ದಿನಾಂಕ: 29.12.2015ರಂದು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ 15ನೇ ಸಭೆಯ ವಿಷಯ ಸಂಖ್ಯೆ: 15.4ರ ನಡವಳಿಯಲ್ಲಿ ಉದ್ದೇಶಿತ Bidadi Integrated Township ಯೋಜನೆಯನ್ನು "Development Plan-Town Planning Schemes" ಆಧಾರದಲ್ಲಿ ಕಾರ್ಯಗತಗೊಳಿಸಲು ತೀರ್ಮಾನಿಸಲಾಗಿರುತ್ತದೆ.

ಬಿಡದಿ ಸ್ಮಾರ್ಟ್ ಸಿಟಿ ಯೋಜನೆಯ ಪ್ರದೇಶ ಒಳಗೊಂಡಂತೆ ಪ್ರತ್ಯೇಕ ಸ್ಥಳೀಯ ಯೋಜನಾ ಪ್ರದೇಶವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯಿದೆ, 1961ರ ಕಲಂ–4(ಎ)ರ ಅಡಿಯಲ್ಲಿ ದಿನಾಂಕ: 03.06.2016 ರಲ್ಲಿ ಅಧಿಸೂಚಿಸಲಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ–4(ಸಿ)ರ ಅಡಿಯಲ್ಲಿ ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರವನ್ನಾಗಿ ದಿನಾಂಕ: 21.10.2016 ರಲ್ಲಿ ಅಧಿಸೂಚಿಸಲಾಗಿದೆ.

ಸ್ಥಳೀಯ ಯೋಜನಾ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ–10ರ ಅಡಿಯಲ್ಲಿ 'ಮಹಾಯೋಜನೆ ತಯಾರಿಕೆಯ ಇಚ್ಛೆಯನ್ನು ಹೊಂದಿರುವ ಬಗ್ಗೆ' "ಕನ್ನಡ ಪ್ರಭ" ಮತ್ತು "ದಿ ಡೆಕ್ಕನ್ ಹೆರಾಲ್ಡ್" ದಿನಪತ್ರಿಕೆಗಳ ದಿನಾಂಕ: 17.11.2016 ರ ಸಂಚಿಕೆಗಳಲ್ಲಿ ಹಾಗೂ ದಿನಾಂಕ: 08.12.2016ರ ಕರ್ನಾಟಕ ರಾಜ್ಯಪತ್ರದಲ್ಲಿ 60 ದಿನಗಳ ಕಾಲಾವಧಿ ನೀಡಿ ಸಾರ್ವಜನಿಕ ಸಲಹೆಗಳನ್ನು ಆಹ್ವಾನಿಸಿ, ಪ್ರಕಟಣೆಯನ್ನು ನೀಡಲಾಗಿರುತ್ತದೆ. ಮಹಾಯೋಜನೆ ತಯಾರಿಸಲು ಅರ್ಹ ಸಮಾಲೋಚಕರ ಆಯ್ಕೆಗಾಗಿ ಇ–ಪ್ರಕ್ಯುರ್‌ಮೆಂಟ್‌ನಲ್ಲಿ ಟೆಂಡರ್ ಪ್ರಕ್ರಿಯೆಯನ್ನು 'ಟೆಕ್ಸಾಕ್' ಸಂಸ್ಥೆಯ ಮೂಲಕ ಕೈಗೊಳ್ಳಲಾಗಿರುತ್ತದೆ. ಇ–ಟೆಂಡರ್‌ನಲ್ಲಿ ಸ್ವೀಕರಿಸಲಾದ ಬಿಡ್ ಪ್ರಸ್ತಾವನೆಗಳ ಪೈಕಿ M/s WAPCOS Ltd ಇವರಿಗೆ ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ ತಯಾರಿಕೆ ಹಾಗೂ ಬಿಡದಿ ಉಪನಗರ ವಿನ್ಯಾಸ ತಯಾರಿಕೆ ಕಾರ್ಯದ ಕಾರ್ಯಾದೇಶವನ್ನು ದಿನಾಂಕ : 17.05.2018 ರಂದು ನೀಡಲಾಗಿದೆ.

ಗ್ರೇಟರ್ ಬೆಂಗಳೂರು–ಬಿಡದಿ ಸ್ಮಾರ್ಟ್ ಸಿಟಿ ಸ್ಥಳೀಯ ಯೋಜನಾ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ–(5)ರನ್ವಯ ದಿನಾಂಕ: 20.10.2018ನ್ನು ಹಾಲಿ ಭೂಉಪಯೋಗ ನಿರ್ಧರಣಾ ದಿನಾಂಕವೆಂದು ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/73/ಬಿಎಂಆರ್/2019 ದಿನಾಂಕ: 12.12.2019ರಲ್ಲಿ ಘೋಷಿಸಲಾಗಿದೆ. ಸ್ಥಳೀಯ ಯೋಜನಾ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ–(6)ರನ್ವಯ ಹಾಲಿ ಭೂಉಪಯೋಗ ನಕ್ಷೆ ತಯಾರಿಸಲಾಗಿದೆ. ದಿನಾಂಕ: 17.12.2019ರಂದು ಕಛೇರಿ ಸೂಚನಾಫಲಕದಲ್ಲಿ ಸಾರ್ವಜನಿಕರಿಂದ ದಾಖಲಿಸಲಾದ ಹಾಲಿ ಭೂಉಪಯೋಗಗಳಿಗೆ ತಿದ್ದುಪಡಿಗಳು ಏನಾದರೂ ಇದ್ದಲ್ಲಿ ತಿಳಿಸುವಂತೆ ಸಲಹೆ/ಆಕ್ಷೇಪಣೆಗಳನ್ನು ಕೋರಿ ಪ್ರಕಟಿಸಲಾಗಿತ್ತು. ಆದರೆ, ಈ ಕುರಿತು ಯಾವುದೇ ಸಲಹೆಗಳು ಸ್ವೀಕೃತವಾಗಿರುವುದಿಲ್ಲ. ಮುಂದುವರೆದು, ಪ್ರಸ್ತಾಪಿತ ಭೂಉಪಯೋಗ ನಕ್ಷೆಗಳ ತಯಾರಿಕೆ ಕಾರ್ಯ ಪ್ರಗತಿಯಲ್ಲಿ ಇರುತ್ತದೆ.

**9. ಬೆಂಗಳೂರು ಮಹಾನಗರ ಪ್ರದೇಶ ವ್ಯಾಪ್ತಿಯಲ್ಲಿ ಇರುವ ಸ್ಥಳೀಯ ಯೋಜನಾ ಪ್ರದೇಶಗಳ ಮಹಾಯೋಜನೆಗಳ ತಯಾರಿಕೆ ಮತ್ತು ಪರಿಷ್ಕರಣೆ ಕುರಿತು:**

ಬೆಂಗಳೂರು ಮಹಾನಗರ ಪ್ರದೇಶ ವ್ಯಾಪ್ತಿಯಲ್ಲಿನ ವಿವಿಧ ಸ್ಥಳೀಯ ಯೋಜನಾ ಪ್ರದೇಶಗಳಲ್ಲಿ ಅನುಮೋದನೆಯಾಗಿರುವ ಮತ್ತು ಪರಿಷ್ಕರಣೆ ಹಂತದಲ್ಲಿರುವ ಮಹಾಯೋಜನೆಗಳ ವಿವರಗಳು ಈ ಕೆಳಗಿನಂತೆ ಇರುತ್ತವೆ.

| ಕ್ರ.ಸಂ. | ಸ್ಥಳೀಯ ಯೋಜನಾ ಪ್ರದೇಶ | ಮಹಾಯೋಜನೆ ಅನುಮೋದನೆಗೊಂಡ ದಿನಾಂಕ | ಷರಾ |
|---|---|---|---|
| 1 | ಆನೇಕಲ್ | ದಿ: 3.9.2014 | – |
| 2 | ಮಾಗಡಿ | ದಿ: 1.6.2015 | ಈ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸೇರ್ಪಡೆಗೊಂಡಿರುವ ಇಂಟರ್‌ಸ್ಟೀಷಿಯಲ್ ವಲಯಗಳಿಗೆ ಮಹಾಯೋಜನೆ ತಯಾರಿಕೆ ಕಾರ್ಯ ಪ್ರಗತಿಯಲ್ಲಿದೆ. |
| 3 | ನೆಲಮಂಗಲ | ದಿ: 1.6.2015 | ಈ ಸ್ಥಳೀಯ ಯೋಜನಾ ಪ್ರದೇಶಗಳಿಗೆ ಸೇರ್ಪಡೆಗೊಂಡಿರುವ ಇಂಟರ್‌ಸ್ಟೀಷಿಯಲ್ ವಲಯಗಳು ಮತ್ತು ಟೌನ್‌ಶಿಪ್ ಪ್ರದೇಶಗಳಿಗೆ ಮಹಾಯೋಜನೆ ತಯಾರಿಕೆ ಕಾರ್ಯ ಪ್ರಗತಿಯಲ್ಲಿದೆ. |
| 4 | ಕನಕಪುರ | ದಿ: 7.8.2015 | |
| 5 | ಹೊಸಕೋಟೆ | ದಿ: 30.01.2018 | ನಂದಗುಡಿ ಟೌನ್‌ಷಿಪ್ ಪ್ರದೇಶಕ್ಕೆ ಮಹಾಯೋಜನೆ ತಯಾರಿಸಲಾಗುತ್ತಿದೆ. |
| 6 | ಬೆಂ.ಅಂ.ವಿ.ನಿ ಪ್ರದೇಶ | ದಿ: 29.1.2009 | ಮಹಾಯೋಜನೆಯ ಪರಿಷ್ಕರಣೆ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ. ದಿನಾಂಕ: 16.03.2016 ರಲ್ಲಿ ಪರಿಷ್ಕೃತ ಮಹಾಯೋಜನೆ ತಯಾರಿಕೆ ಇಚ್ಛೆಯನ್ನು ಪ್ರಕಟಿಸಲಾಗಿದೆ. ಮಹಾಯೋಜನೆ ತಯಾರಿಕೆ ಕಾರ್ಯಕ್ಕೆ ಸಮಾಲೋಚಕರಾದ **M/s Sky Group** ಸಂಸ್ಥೆ ಇವರಿಗೆ ದಿನಾಂಕ: 29.06.2019ರಂದು ಕಾರ್ಯದೇಶವನ್ನು ನೀಡಲಾಗಿದೆ. ಮೂಲ ನಕ್ಷೆ ತಯಾರಿಕೆ ಕಾರ್ಯ ಪ್ರಗತಿಯಲ್ಲಿದೆ. |
| 7 | ಗ್ರೇಟರ್ ಬೆಂಗಳೂರು–ಬಿಡದಿ ಸ್ಮಾರ್ಟ್ ಸಿಟಿ | ದಿ: 03.06.2016 ರಂದು ಸ್ಥಳೀಯ ಯೋಜನಾ ಪ್ರದೇಶ ಘೋಷಣೆ | ಗ್ರೇಟರ್ ಬೆಂಗಳೂರು – ಬಿಡದಿ ಸ್ಮಾರ್ಟ್ ಸಿಟಿ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ ತಯಾರಿಕೆ ಹಾಗೂ ಬಿಡದಿ ಉಪನಗರ ವಿನ್ಯಾಸ ತಯಾರಿಕೆ ಕಾರ್ಯದ ಕಾರ್ಯಾದೇಶವನ್ನು **M/s WAPCOS Ltd** ಇವರಿಗೆ ದಿನಾಂಕ: 17.05.2018 ರಲ್ಲಿ ನೀಡಲಾಗಿದೆ ಹಾಗೂ |

| | | | |
|---|---|---|---|
| | | | ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ-(5)ರನ್ವಯ ದಿನಾಂಕ: 20.10.2018ನ್ನು ಹಾಲಿ ಭೂಉಪಯೋಗ ನಿರ್ಧರಣಾ ದಿನಾಂಕವೆಂದು ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/73/ ಬಿಎಂಆರ್/2019 ದಿನಾಂಕ: 12.12.2019ರಲ್ಲಿ ಘೋಷಿಸಲಾಗಿದೆ. ಸ್ಥಳೀಯ ಯೋಜನಾ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ-(6)ರನ್ವಯ ಹಾಲಿ ಭೂಉಪಯೋಗ ನಕ್ಷೆ ತಯಾರಿಸಲಾಗಿದೆ. ದಿನಾಂಕ: 17.12.2019 ರಂದು ಕಛೇರಿ ಸೂಚನಾಫಲಕದಲ್ಲಿ ಸಾರ್ವಜನಿಕರಿಂದ ದಾಖಲಿಸಲಾದ ಹಾಲಿ ಭೂಉಪಯೋಗಗಳಿಗೆ ತಿದ್ದುಪಡಿಗಳು ಏನಾದರೂ ಇದ್ದಲ್ಲಿ ತಿಳಿಸುವಂತೆ ಸಲಹೆ/ಆಕ್ಷೇಪಣೆಗಳನ್ನು ಕೋರಿ ಪ್ರಕಟಿಸಲಾಗಿತ್ತು. ಆದರೆ, ಈ ಕುರಿತು ಯಾವುದೇ ಸಲಹೆಗಳು ಸ್ವೀಕೃತವಾಗಿರುವುದಿಲ್ಲ. ಮುಂದುವರೆದು, ಪ್ರಸ್ತಾಪಿತ ಭೂಉಪಯೋಗ ನಕ್ಷೆಗಳ ತಯಾರಿಕೆ ಕಾರ್ಯ ಪ್ರಗತಿಯಲ್ಲಿ ಇರುತ್ತದೆ. |
| 8 | ಉಪನಗರ ವರ್ತುಲ ರಸ್ತೆ **(STRR)** | ದಿ: 24.06.2016 ರಂದು ಸ್ಥಳೀಯ ಯೋಜನಾ ಪ್ರದೇಶ ಘೋಷಣೆ | ಉಪನಗರ ವರ್ತುಲ ರಸ್ತೆ (STRR) ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ ತಯಾರಿಕೆ ಕಾರ್ಯದ ಕಾರ್ಯಾದೇಶವನ್ನು M/s WAPCOS Ltd ಇವರಿಗೆ ದಿನಾಂಕ: 16.05.2018 ರಲ್ಲಿ ನೀಡಲಾಗಿದೆ ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ-(5)ರನ್ವಯ ದಿನಾಂಕ: 20.10.2018ನ್ನು ಹಾಲಿ ಭೂಉಪಯೋಗ ನಿರ್ಧರಣಾ ದಿನಾಂಕವೆಂದು ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/73/ ಬಿಎಂಆರ್/2019 ದಿನಾಂಕ: 12.12.2019ರಲ್ಲಿ ಘೋಷಿಸಲಾಗಿದೆ. ಸ್ಥಳೀಯ ಯೋಜನಾ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ-(6)ರನ್ವಯ ಹಾಲಿ ಭೂಉಪಯೋಗ ನಕ್ಷೆ ತಯಾರಿಸಲಾಗಿದ್ದು, ಅದನ್ನು ದಿನಾಂಕ: 17.12.2019ರಂದು ಯೋಜನಾ ಪ್ರಾಧಿಕಾರದ ಕಛೇರಿಯ ಸೂಚನಾಫಲಕದಲ್ಲಿ ಸಾರ್ವಜನಿಕರಿಂದ ದಾಖಲಿಸಲಾದ ಹಾಲಿ ಭೂಉಪಯೋಗಗಳಿಗೆ ತಿದ್ದುಪಡಿಗಳಿದ್ದಲ್ಲಿ ತಿಳಿಸುವಂತೆ ಕೋರಿ ಪ್ರಕಟಿಸಲಾಗಿತ್ತು. ಆದರೆ, ಈ ಕುರಿತು ಯಾವುದೇ ಸಲಹೆಗಳು ಸ್ವೀಕೃತವಾಗಿರುವುದಿಲ್ಲ. ಮುಂದುವರೆದು, ಪ್ರಸ್ತಾಪಿತ ಭೂಉಪಯೋಗ ನಕ್ಷೆಗಳ ತಯಾರಿಕೆ ಕಾರ್ಯ ಪ್ರಗತಿಯಲ್ಲಿ ಇರುತ್ತದೆ. |
| 9 | ಚನ್ನಪಟ್ಟಣ | ದಿ: 10.03.2017 ರಂದು ಸ್ಥಳೀಯ ಯೋಜನಾ ಪ್ರದೇಶ ಘೋಷಣೆ | ಸರ್ಕಾರದ ಅಧಿಸೂಚನೆ ದಿನಾಂಕ: 10.03.2017 ರಲ್ಲಿ ರಾಮನಗರ-ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರವನ್ನು ಪ್ರತ್ಯೇಕಿಸಿ, 116 ಗ್ರಾಮಗಳನ್ನೊಳಗೊಂಡ ಚನ್ನಪಟ್ಟಣ ಸ್ಥಳೀಯ ಯೋಜನಾ ಪ್ರದೇಶವನ್ನು ಅಧಿಸೂಚಿಸಲಾಗಿದ್ದು, ಮಹಾಯೋಜನೆ ತಯಾರಿಕೆ ಇಚ್ಛೆಯನ್ನು ಪ್ರಕಟಿಸಲಾಗಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ-(5)ರನ್ವಯ ಹಾಲಿ ಭೂಬಳಕೆ ದಿನಾಂಕವನ್ನು ದಿನಾಂಕ: 24.05.2019ರಂದು ನಿಗದಿಪಡಿಸಲು ಅಧಿಸೂಚನೆ ಹೊರಡಿಸಲು ಸರ್ಕಾರಕ್ಕೆ ದಿನಾಂಕ: 03.02.2020ರಂದು ಕೋರಲಾಗಿದೆ. |
| 10 | ದೊಡ್ಡಬಳ್ಳಾಪುರ | ದಿ: 30.11.2017 ರಂದು ಸ್ಥಳೀಯ ಯೋಜನಾ ಪ್ರದೇಶ ಘೋಷಣೆ | ಸರ್ಕಾರದ ಅಧಿಸೂಚನೆ ದಿನಾಂಕ: 30.11.2017 ರಲ್ಲಿ ಬೆಂ.ಅಂ.ವಿ.ನಿ.ಪ್ರದೇಶ ಯೋಜನಾ ಪ್ರಾಧಿಕಾರವನ್ನು ಪ್ರತ್ಯೇಕಿಸಿ, 294 ಗ್ರಾಮಗಳನ್ನೊಳಗೊಂಡ ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶವನ್ನು ಅಧಿಸೂಚಿಸಲಾಗಿರುತ್ತದೆ. ದಿನಾಂಕ: 13.05.2019ರಂದು ಮಹಾಯೋಜನೆ ತಯಾರಿಕೆ ಇಚ್ಛೆಯನ್ನು ಪ್ರಕಟಿಸಲಾಗಿದ್ದು, ಮಹಾಯೋಜನೆ ತಯಾರಿಕೆ ಕಾರ್ಯ ಕೈಗೆತ್ತಿಕೊಳ್ಳಬೇಕಾಗಿರುತ್ತದೆ. |

| | | | |
|---|---|---|---|
| 11 | ರಾಮನಗರ | ದಿ: 24.10.2013 ರಂದು ರಾಮನಗರ ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರದ ಮಧ್ಯಂತರ ಮಹಾಯೋಜನೆಗೆ ಅಂತಿಮ ಅನುಮೋದನೆ ನೀಡಲಾಗಿದೆ.<br>ದಿ: 10.03.2017 ರಂದು ರಾಮನಗರ ಚನ್ನಪಟ್ಟಣವನ್ನು ಮರುವಿಂಗಡಣೆ ಮಾಡಿ ರಾಮನಗರ ಸ್ಥಳೀಯ ಯೋಜನಾ ಪ್ರದೇಶ ಘೋಷಣೆ ಮಾಡಲಾಗಿದೆ. | ಸರ್ಕಾರದ ಅಧಿಸೂಚನೆ ದಿನಾಂಕ: 10.03.2017 ರಲ್ಲಿ ರಾಮನಗರ–ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರವನ್ನು ಪ್ರತ್ಯೇಕಿಸಿ, 37 ಗ್ರಾಮಗಳನ್ನೊಳಗೊಂಡ ರಾಮನಗರ ಸ್ಥಳೀಯ ಯೋಜನಾ ಪ್ರದೇಶವನ್ನು ಅಧಿಸೂಚಿಸಲಾಗಿದ್ದು, ಮಹಾಯೋಜನೆ ತಯಾರಿಕೆಯ ಕಾರ್ಯ ಪ್ರಗತಿಯಲ್ಲಿರುತ್ತದೆ. |

## 10. ಆರ್‌ಟಿಐ ಕಾಯ್ದೆ ಸ್ಥಾನಮಾನ ಮತ್ತು ವರದಿ (RTI Act : Status and Report):

ಈ ವರದಿಯ ಅವಧಿಯಲ್ಲಿ ಈ ಕೆಳಕಂಡ ಅಧಿಕಾರಿಗಳು ಮಾಹಿತಿ ಹಕ್ಕು ಕಾಯ್ದೆಯಡಿ ಮೇಲ್ಮನವಿ ಪ್ರಾಧಿಕಾರ, ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಈ ಪ್ರಾಧಿಕಾರದ ಅಪರ ಮಹಾನಗರ ಆಯುಕ್ತರವರನ್ನು ಈ ಪ್ರಾಧಿಕಾರದ ಮಾಹಿತಿ ಹಕ್ಕು ಕಾಯ್ದೆಯ ವಿಚಾರಗಳಿಗೆ ನೋಡೆಲ್ ಅಧಿಕಾರಿ ಎಂದು ನಾಮ ನಿರ್ದೇಶನ ಮಾಡಲಾಗಿದೆ.

| ಕ್ರ.ಸಂ. | **ಸಾರ್ವಜನಿಕ ಮಾಹಿತಿ ಅಧಿಕಾರಿ U/S 5 (1)** | **ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ U/S 5 (2)** | **ಮೇಲ್ಮನವಿ ಅಧಿಕಾರಿ U/S 19 (1)** |
|---|---|---|---|
| 1 | **ಆಡಳಿತ ಮತ್ತು ಕಂದಾಯ ಶಾಖೆಯ ವಿಷಯಗಳು** | | |
| | ಸಹಾಯಕ ಮಹಾನಗರ ಆಯುಕ್ತರು | ತಹಸೀಲ್ದಾರ್ | ಉಪ ಮಹಾನಗರ ಆಯುಕ್ತರು |
| 2 | **ನಗರ ಮತ್ತು ಗ್ರಾಮಾಂತರ ಯೋಜನಾ ಶಾಖೆಯ ವಿಷಯಗಳು** | | |
| | ಉಪ ನಿರ್ದೇಶಕರು–1 ನಗರ ಮತ್ತು ಗ್ರಾಮಾಂತರ ಯೋಜನೆ | ಸಹಾಯಕ ನಿರ್ದೇಶಕರು ನಗರ ಮತ್ತು ಗ್ರಾಮಾಂತರ ಯೋಜನೆ | ಹೆಚ್ಚುವರಿ ನಿರ್ದೇಶಕರು ನಗರ ಮತ್ತು ಗ್ರಾಮಾಂತರ ಯೋಜನೆ |
| 3 | **ಲೆಕ್ಕ ಶಾಖೆಯ ವಿಷಯಗಳು** | | |
| | ಲೆಕ್ಕಾಧಿಕಾರಿಗಳು | ಲೆಕ್ಕಾಧೀಕ್ಷಕರು | ಉಪ ಮಹಾನಗರ ಆಯುಕ್ತರು |

ಈ ವರದಿಯ ಅವಧಿಯಲ್ಲಿ ಮಾಹಿತಿಯನ್ನು ಕೋರಿ ಮೇಲ್ಕಂಡ 3 ಮಾಹಿತಿ ಅಧಿಕಾರಿಗಳಿಗೆ ಒಟ್ಟು 71 ಅರ್ಜಿಗಳು ಸ್ವೀಕೃತವಾಗಿವೆ. ಈ ಪೈಕಿ 71 ಅರ್ಜಿಗಳಿಗೆ ನಿಗಧಿತ ಅವಧಿಯಲ್ಲಿ ಮಾಹಿತಿ ಒದಗಿಸಲಾಗಿದೆ. ಯಾವುದೇ ಅರ್ಜಿಗಳಿಗೆ ಮಾಹಿತಿ ಒದಗಿಸಲು ಬಾಕಿ ಇರುವುದಿಲ್ಲ.

| ಕ್ರ.ಸಂ. | ಶಾಖೆ | ಪ್ರಾರಂಭಿಕ ಶಿಲ್ಕು | ಸ್ವೀಕೃತಿ | ಒಟ್ಟು ವಿಲೇವಾರಿ | ಬಾಕಿ |
|---|---|---|---|---|---|
| 1 | ಸಿಬ್ಬಂದಿ ಮತ್ತು ಕಂದಾಯ | 0 | 06 | 06 | 0 |
| 2 | ತಾಂತ್ರಿಕ | 0 | 65 | 65 | 0 |
| 3 | ಲೆಕ್ಕಶಾಖೆ | 0 | 00 | 00 | 0 |
| | ಒಟ್ಟು | 0 | 71 | 71 | 0 |

**11. ಅಂತರ್ಜಾಲ (Website) :**

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಮತ್ತು ಸಾಮಾನ್ಯ ತಿಳುವಳಿಕೆಗೋಸ್ಕರ ಒಂದು ಅಂತರ್ಜಾಲ (website) ನ್ನು ತೆರೆಯಲಾಗಿದೆ. ಅದು ಬಿಎಂಆರ್‌ಡಿಎ ಪ್ರಾಧಿಕಾರದ ಚಟುವಟಿಕೆಗಳನ್ನು ತಿಳಿಸುತ್ತದೆ. bmrda.karnataka.gov.in ಈ ಅಂತರ್ಜಾಲದಲ್ಲಿ ಈ ಪ್ರಾಧಿಕಾರವು ಆಗಿಂದಾಗ್ಗೆ ಕೈಗೊಳ್ಳುವ ನಿರ್ಧಾರಗಳನ್ನು ಮತ್ತು ಯೋಜನೆಗಳ ವಿವರಗಳನ್ನು up to date ಮಾಡಲಾಗುತ್ತಿದೆ. ಈ ವೆಬ್‌ಸೈಟ್ ನಿರ್ವಹಣೆ ಮತ್ತು ಮೇಲ್ವಿಚಾರಣೆಯನ್ನು ಈ ಪ್ರಾಧಿಕಾರದ ಸಹಾಯಕ ನಿರ್ದೇಶಕರು (ನಗರ ಯೋಜನೆ) ಇವರಿಗೆ ವಹಿಸಲಾಗಿದೆ. ಅಂತರ್ಜಾಲದಲ್ಲಿ ಇರುವ ವಿವರಗಳು ಈ ಕೆಳಕಂಡಂತಿವೆ.

1. ಸಂಘಟನೆಯ ಮಾಹಿತಿ (Organization Profile)
2. ಪರಿಷ್ಕೃತ ರಚನಾ ನಕ್ಷೆ ಮತ್ತು ಸಮಗ್ರ ಸಂಚಾರ ಸಾರಿಗೆ ಅಧ್ಯಯನ (Revised Structure Plan & Comprehensive Traffic and Transport Study)
3. ಸ್ಥಳೀಯ ಯೋಜನಾ ಪ್ರಾಧಿಕಾರಗಳು (Local Planning Areas [LPA] in BMR)
4. ಸರ್ಕಾರದ ಅಧಿಸೂಚನೆಗಳು ಮತ್ತು ಆದೇಶಗಳು (Government Notifications and Circulars)
5. ಈ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಸ್ಥಳೀಯ ಯೋಜನಾ ಪ್ರಾಧಿಕಾರಗಳ ಅಂತರ್ಜಾಲಗಳು (Link to other Local Planning Authority Website)
6. ಸಾರ್ವಜನಿಕ ಸಂಪರ್ಕ ಮಾಹಿತಿ
7. ಮಾಹಿತಿ ಹಕ್ಕು ಕಾಯ್ದೆಯ ಕಲಂ-4(1)(ಎ) ಮತ್ತು 4(1)(ಬಿ) ರಂತೆ 2019-20ನೇ ಸಾಲಿನ ಮಾಹಿತಿ.
8. ನಾಗರೀಕ ಸನ್ನದ್ದು.

ಈ ಪ್ರಾಧಿಕಾರದ ಇ-ಮೇಲ್ ಐಡಿ ಆದ mc.bmrda@ka.gov.in ಇದು ಚಾಲ್ತಿಯಲ್ಲಿದ್ದು, ಸಾರ್ವಜನಿಕರು ಅವರವರ ಆಕ್ಷೇಪಣೆಗಳನ್ನು ಇ-ಮೇಲ್ ಐಡಿಗೆ ಕಳುಹಿಸಿಕೊಡಬಹುದಾಗಿರುತ್ತದೆ.

ಮೇಲ್ಕಂಡ ವಿವರಗಳನ್ನು ಆಗಿಂದಾಗ್ಗೆ update ಮಾಡುತ್ತಿರುವುದರಿಂದ ಈ ಪ್ರಾಧಿಕಾರಕ್ಕೆ ಭೇಟಿ ನೀಡುವ ಸಾಮಾನ್ಯ ಜನದಟ್ಟಣೆ ಕಡಿಮೆಯಾಗಿರುತ್ತದೆ. ಅಲ್ಲದೆ ಸಾರ್ವಜನಿಕರಿಗೆ ಕೂಡಲೇ ಬಿಎಂಆರ್‌ಡಿಎಗೆ ಸಂಬಂಧಿಸಿದ ಮಾಹಿತಿ ಮತ್ತು ವಿವರಗಳು ಪಾರದರ್ಶಕವಾಗಿ ಸಿಗುವಂತೆ ಮಾಡಲಾಗಿದೆ.

## 12. ಪ್ರಾಧಿಕಾರದ ಸಿಬ್ಬಂದಿ ವಿವರ (Staff Position):

ಈ ಪ್ರಾಧಿಕಾರದ ವೃಂದ ಮತ್ತು ನೇಮಕಾತಿ ನಿಯಮಗಳಂತೆ ದಿನಾಂಕ: 31-03-2021 ಕ್ಕೆ ಒಟ್ಟು 47 ಹುದ್ದೆಗಳು ಮಂಜೂರಾಗಿರುತ್ತದೆ. ಈ ಹುದ್ದೆಗಳ ಪೈಕಿ 22 ಹುದ್ದೆಗಳು ಭರ್ತಿಯಾಗಿದ್ದು, ಉಳಿದ 25 ಹುದ್ದೆಗಳು ಖಾಲಿ ಇರುತ್ತವೆ. ಇದಲ್ಲದೆ 12 ಹುದ್ದೆಗಳನ್ನು ತಾತ್ಕಾಲಿಕವಾಗಿ ಒಂದು ವರ್ಷಕ್ಕೆ ಮಂಜೂರು ಮಾಡಲು ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆಯಲಾಗಿದ್ದು, ವರದಿಯ ಅವಧಿಯಲ್ಲಿ ಈ ತಾತ್ಕಾಲಿಕ ಹುದ್ದೆಗಳ ಪೈಕಿ ಎರಡು ಜಂಟಿ ನಿರ್ದೇಶಕರು, ಮೂರು ಸಹಾಯಕ ನಿರ್ದೇಶಕರು, ಏಳು ನಗರ ಯೋಜಕರು ಹುದ್ದೆಗಳನ್ನು ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆಯಿಂದ ಭರ್ತಿ ಮಾಡಲಾಗಿದೆ.

ಈ ಪ್ರಾಧಿಕಾರದ ಹಾಲಿ ಮಂಜೂರಾತಿಯಾಗಿರುವ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಅಧಿಕಾರಿಗಳ ಮತ್ತು ಸಿಬ್ಬಂದಿ ವರ್ಗದವರ ವಿವರ ಹಾಗೂ ಖಾಲಿ ಹುದ್ದೆಗಳ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿರುತ್ತದೆ.

## 13. ಪ್ರಾಧಿಕಾರದ ಆಯವ್ಯಯ ಪತ್ರ (Budget):

2020-21ನೇ ಸಾಲಿನಲ್ಲಿ ಪ್ರಾಧಿಕಾರವು ಸರ್ಕಾರದಿಂದ ಯಾವುದೇ ಅನುದಾನವನ್ನು ಪಡೆದಿರುವುದಿಲ್ಲ. ಸದರಿ ಸಾಲಿನಲ್ಲಿ ಪ್ರಾಧಿಕಾರವು ತನ್ನ ಆಂತರಿಕ ಸಂಪನ್ಮೂಲಗಳಿಂದ ಯೋಜನಾ ಮತ್ತು ಆಡಳಿತಾತ್ಮಕ ವೆಚ್ಚಗಳನ್ನು ಭರಿಸಿರುತ್ತದೆ.

2020-21ನೇ ಸಾಲಿನ (ಅಂದರೆ 01-04-2020 ರಿಂದ 31-03-2021 ರವರೆಗೆ) ವೆಚ್ಚ ಹಾಗೂ ಆದಾಯದ ತಃಖ್ತೆಗಳನ್ನು ಕ್ರಮವಾಗಿ ಅನುಬಂಧ-2 ಹಾಗೂ ಅನುಬಂಧ-3 ರಲ್ಲಿ ನೀಡಲಾಗಿದೆ.

ಸಹಿ/-
ಮಹಾನಗರ ಆಯುಕ್ತರು,
ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ
ಪ್ರಾಧಿಕಾರ, ಬೆಂಗಳೂರು.

**Annual Report of Bangalore Metropolitan Region Development Authority for the year 2020-2021 [01-04-2020 to 31-03-2021]**

## 1. Introduction :-

The Bangalore Metropolitan Region Development Authority (BMRDA) is an Authority established under the Bangalore Metropolitan Region Development Authority Act, 1985 (Karnataka Act No. 39 of 1985), for the purposes of planning, coordinating and supervising the proper and orderly development of the area within the Bangalore Metropolitan Region and allied matters.

## 2. Functions of the Authority:-

The BMRDA Act declares that the Authority shall be a body corporate with power to acquire, hold and dispose of property and to enter into contracts etc. (section 3). The specific tasks required to be performed by the BMRDA are enumerated in section 9 of the Act and are as follows:-

i. To carry out a survey of the Bangalore Metropolitan Region and prepare reports on the surveys so carried out.

ii. To prepare a Structure Plan for the development of the Bangalore Metropolitan Region.

iii. To cause to be carried out such works as are contemplated in the Structure Plan.

iv. To formulate suitable schemes for implementing the Structure Plan.

v. To secure and coordinate execution of the town planning schemes for the development of the Bangalore Metropolitan Region.

vi. To raise finance for any project or scheme for the development of the Bangalore Metropolitan Region and to extend assistance to the Local Authorities in the Region for the execution of such projects or schemes.

vii. To do such other acts or things as may be entrusted by the Government or as may be necessary for, or incidental to, any matters that are necessary for furtherance of the objects for which the Authority is constituted.

viii. To entrust to any Local Authority the work of execution of any development plan or town planning scheme.

ix. To coordinate the activities of the Bangalore Development Authority (BDA), the Bruhat Bangalore Mahanagar Palike (BBMP), the

Bangalore Water Supply and Sewerage Board (BWSSB), the Karnataka Slum Clearance Board (KSCB), the Bangalore Electricity Supply Company Limited (BESCOM), the Karnataka Industrial Areas Development Board (KIADB), the Karnataka State Road Transport Corporation (KSRTC) and such other bodies as are connected with developmental activities in the Bangalore Metropolitan Region.

## 3. Composition of the Authority and its Executive Committee:-

The Chief Minister of the State is the Chairman, the Minister for Urban Development, is the Vice Chairman and the Secretaries to Government and heads of several related departments/ organisations are the Members in the Authority. The Act also provides for nomination by the Government of individuals representing labour, women, scheduled castes, scheduled tribes, members of the State Legislature and representatives of the Local Authorities from the Region. Such representations fell vacant since July 2005 due to removal / resignation of the nominees. The Metropolitan Commissioner is the ex-officio Member Secretary of the Authority.

The Executive Committee is chaired by the Minister for Urban Development, while the Metropolitan Commissioner is the Vice Chairman and the Mayor of Bangalore, the Secretaries to Government and heads of several related departments/ organisations are the Members.

## 4. The Metropolitan Region:-

The Bangalore Metropolitan Region (BMR) is one of the largest among the Metropolitan Regions in the country covering the entire Bangalore Urban, Bangalore Rural and Ramanagaram Districts measuring 8005 sq. kms. With a population of 8.42 million (2011 Census).

## 5. Revised Structure Plan -2031:-

The final 'Revised Structure Plan-2031' of BMR has been approved by Government vide order no. UDD/149/BMR/2014 dated: 08/05/2017.

## 6. Comprehensive Traffic and Transportation Study:-

The 'Comprehensive Traffic and Transportation Study' of BMR for improve the basic transport infrastructures, traffic conditions and goods transport in the BMR approved vide resolution no. 15.15 dated: 29/12/2015 of BMRDA has been submitted to the Government on 08.01.2016 for approval.

## 7. Development of proposed satellite Town Ring Road (STRR) in BMR:-

The approved Structure Plan-2011 had proposed the concept of development of STRR, IRR, RR and ITRR to decongest the traffic and population in the core of Bangalore city. The total length of the STRR is 204 km connecting important Towns - Dobaspet, Doddaballapur, Devanahalli, Sulibele, Hoskote, Sarjapur, Attibele, Anekal, Thattekere, Kanakapur, Ramanagara and Magadi in BMR. ITRR is of total length of 163 km are proposed for around Kanakapura, Ramanagar, Magadi, Nelamangala, Doddaballapura, Devanahalli, Hoskote and Anekal towns which acts as bye pass road for STRR to these towns.

Bangalore Metropolitan Region Development Authority in its 15th Meeting vide subject 15:4 held on 29.12.2015 under the Chairmanship of the Hon'ble Chief Minister has resolved to develop the STRR and ITRR through the 'Development Plan and Town Planning Scheme' mechanism.

Local Planning Area for Satellite Town Ring Road is notified under section 4(a) of KTCP Act 1961 vide Government notification dated: 24.06.2016. STRR Planning Authority constituted under section 4(c) of KTCP Act 1961 vide Government Notification dated: 21.10.2016.

'Declaration of Intention to prepare Master Plan' inviting public suggestions for a period of 60 days as per provisions under section 10 of KTCP Act 1961, is published in "Prajavani" and "The Hindu" newspapers on 17.11.2016 and in the State Gazette on 08.12.2016. Tender process for selection of consultant has been taken up through TECSOK and Work order issued to M/s WAPCOS Ltd for preparation of Master Plan for Satellite Town Ring Road (STRR) Local Planning Area on 16/05/2018.

For the Local Planning Area of Satellite Town Ring Road Planning Authority (STRR) the Government in its Notification No. NaAaEe/73/BMR/2019 dated: 12.12.2019 has specified the present land use date as 20.10.2018, as per the provisions under Section 5 of KTCP Act 1961. The Existing (Present) land use maps were prepared for the Local Planning Area of Satellite Town Ring Road Planning Authority (STRR) as per the provisions under Sec 6 of the KTCP Act 1961. The Existing (Present) land use maps were displayed in the Planning Authority notice board on 17.12.2019, inviting Correction if any from the Public. Since, there were no any suggestion received. Preparation of Propose land use maps are in progress.

## 8. Great Bangalore - Bidadi Smart City:-

The Government has envisaged to take up the development of five integrated townships with "work-live-play" concept at Bidadi, Ramanagara (Ramanagara Taluk),

Sathanur (Kanakapura Taluk), Solur (Magadi Taluk) and Nandagudi (Hosakote Taluk) in its Government order no: UDD/97/BMR/2006 dated 18.10.2006 and Bidadi Integrated Township Project (BITP) would be implemented as the first pilot project through private sector investments on competitive global bid route.

1. Bidadi Integrated Township (Ramanagara Taluk)
2. Ramanagara Integrated Township (Ramanagara Taluk)
3. Sathanur Integrated Township (Kanakapura Taluk)
4. Soluru Integrated Township (Magadi Taluk)
5. Nandagudi Integrated Township (Hoskote Taluk)

Initially, It was proposed to procure 9178 Acres of lands in 10 villages of Bidadi Hobli, Ramanagar Taluk for Integrated Township of Bidadi through the land acquisition. Authority in its 15th meeting vide subject 15:5 held on 29.12.2015 under the Chairmanship of the Hon'ble Chief Minister has resolved to implement the proposed Bidadi Integrated Township scheme through the Development Plan and Town Planning Scheme.

Separate Local Planning Area for Greater Bengaluru-Bidadi Smart City is notified under the section4(a) of KTCP Act 1961vide Government notification dated: 03.06.2016. Greater Bengaluru-Bidadi smart city Planning Authority is constituted under section 4(c) of KTCP Act 1961vide Government Notification dated: 21.10.2016.

'Declaration of Intention to prepare Master Plan' inviting public suggestions for a period of 60 days as per provisions under section 10 of KTCP Act 1961 is published in 'Kannada Prabha' and 'The Deccan Herald' newspapers on 17.11.2016 and in the State Gazette on 08.12.2016. Tender process for selection of consultant has been taken up through TECSOK and Work order issed to M/s WAPCOS Ltd for preparation of Master Plan for Great Bangalore Bidadi Smart City Local Planning Area & for Design of Bidadi Townshipon 17.05.2018.

For the Local Planning Area of Greater Bangaluru-Bidadi Smart City Planning Authority the Government in its Notification No. NaAaEe/74/BMR/2019 dated: 12.12.2019 has specified the present land use date as 20.10.2018, as per the provisions under Section 5 of KTCP Act 1961. The Existing (Present) land use maps were prepared for the Local Planning Area of Greater Bangaluru-Bidadi Smart City Planning Authority as per the provisions under Sec 6 of the KTCP Act 1961. . The Existing (Present) land use maps were displayed in the Planning Authority notice board on 17.12.2019, inviting Correction if any from the Public. Since, there were no any suggestion received. Preparation of Propose land use maps are in progress.

## 9. Preparation/Revision of the Master Plans for Local Planning Areas in the BMR:-

The Details of the approved and revision of the Master Plans of Local Planning Areas in the BMR are as follows.

| Sl. No | Local Planning Areas | Date of Approval | Remarks |
|---|---|---|---|
| 1 | Anekal | 03.09.2014 | - |
| 2 | Magadi | 01.06.2015 | Preparation of Master Plans is in progress for newly included Interstitial areas. |
| 3 | Nelamangala | 01.06.2015 | Preparation of Master Plans is in progress for newly included Interstitial areas and Township areas. |
| 4 | Kanakapura | 07.08.2015 | |
| 5 | Hoskote | 30.01.2018 | Preparation of Master Plans is in progress for Nandagudi Township Area. |
| 6 | BIAAPA | 29.01.2009 | Revision of Master Plan has been taken up. Declaration of intention of preparation of Revised Master Plan has been published on 16.03.2016 and for preparation of Master plan work order issued to M/s Sky Group on 29.06.2019. Preparation of Basemap is in progress. |
| 7 | Greater Bengaluru- Bidadi Smart City | LPA Declared on 03.06.2016 | Tender process for selection of consultant has been taken up through TECSOK and Work order issued to M/s WAPCOS Ltd for preparation of Master Plan for Great Bangalore Bidadi Smart City Local Planning Area & the Government in its Notification No. NaAaEe/74/BMR/2019 dated: 12.12.2019 has specified the present land use date as 20.10.2018, as per the provisions under Section 5 of KTCP Act 1961. The Existing (Present) land use maps were prepared for the Local Planning Area of Greater Bangaluru-Bidadi Smart City Planning Authority as per the provisions under Sec 6 of the KTCP Act 1961. The Existing (Present) land use maps were displayed in the Planning Authority notice board on 17.12.2019, inviting Correction if any from the Public. Since, there were no any suggestion received. Preparation of Propose land use maps are in progress. |

| | | | |
|---|---|---|---|
| 8 | Satellite Town Ring Road (STRR) | LPA Declared on 24.06.2016 | Tender process for selection of consultant has been taken up through TECSOK and Work order issued to M/s WAPCOS Ltd for preparation of Master Plan for Satellite Town Ring Road (STRR) Local Planning Area on 16/05/2018. the Government in its Notification No. NaAaEe/73/BMR/2019 dated: 12.12.2019 has specified the present land use date as 20.10.2018, as per the provisions under Section 5 of KTCP Act 1961. The Existing (Present) land use maps were prepared for the Local Planning Area of Satellite Town Ring Road Planning Authority (STRR) as per the provisions under Sec 6 of the KTCP Act 1961. The Existing (Present) land use maps were displayed in the Planning Authority notice board on 17.12.2019, inviting Correction if any from the Public. Since, there were no any suggestion received. Preparation of Propose land use maps are in progress. |
| 9 | Channapattana | LPA Declared on 10.03.2017 | Channapattana Local Planning Area comprising of 116 villages is notified as per provisions under section 4(a) of KTCP Act 1961 by Government vide notification dated: 10.03.2016. Preparation of Master Plan is in progress & The Existing (Present) land use maps were prepared for the Local Planning Area has specified the present land use date as 24.05.2019, as per the provisions under Section 5 of KTCP Act 1961, the proposal has been sent to the Government on 03.02.2020 to issue the Government Notification. |
| 10 | Doddaballapura | LPA Declared on 30.11.2017 | Channapattana Local Planning Area comprising of 294 villages is notified as per provisions under section 4(a) of KTCP Act 1961 by Government vide notification dated: 30.11.2017. Intention to prepare the Master Plan has been published on 13.05.2019 and The preparation of Master Plan has to be to be taken up. |
| 11 | Ramanagara | IMP has been approved on 24.10.2013 for Ramanagara and Channapattana Urban Development. LPA has been declared for Ramanagara on 10.03.2017 | Ramanagara Local Planning Area comprising of 37 villages is notified as per provisions under section 4(a) of KTCP Act 1961 by Government vide notification dated: 10.03.2016. Preparation of Master Plan is in progress. |

## 10. RTI Act - Status and Report:

The following officers have been designated as Public Information officers, Assistant Public Information officer and Appellate Authorities and accordingly they are performing their duties. The Additional Metropolitan Commissioner has been nominated as Nodal Officer for all matters relating Right to Information Act for this Authority.

| Sl.No. | Public Information officer U/S 5 (1) | Assistant Public Information officer U/S 5 (2) | Appellate Authority U/S 19 (1) |
|---|---|---|---|
| 1 | **Administration & Revenue Section matters** | | |
| | Assistant Metropolitan Commissioner | Tahasildar | Deputy Metropolitan Commissioner |
| 2 | **Town & Country Planning Section matters** | | |
| | Deputy Director of Town & Country Planning | Assistant Director of Town & Country Planning | Additional Director of Town & Country Planning |
| 3 | **Accounts Section matters** | | |
| | Accounts Officer | Account Superintendent | Deputy Metropolitan Commissioner |

Totally 71 applications under the RTI Act, have been received during this period information have been provided to the applicants in 71 cases. Nil application are pending at the end of the period.

| Sl. No. | Section | Opening Balance | Received | Total Disposal | Balance |
|---|---|---|---|---|---|
| 1 | EST & Revenue | 0 | 06 | 06 | 0 |
| 2 | Technical | 0 | 65 | 65 | 0 |
| 3 | Accounts | 0 | 00 | 00 | 0 |
| | **Total** | 0 | 71 | 71 | 0 |

## 11. Website:

In order to facilitate dissemination of information to the general public about the activities of the Authority, the website of the Authority is created on internet as <bmrda.karnataka.gov.in>. As of now the website contains the following information.

1. Organisation Profile
2. Revised Structure Plan and Comprehensive Traffic and Transport Study
3. Local Planning Areas [LPA] in BMR
4. Government Notifications and Orders
5. Link to other LPA websites
6. Details of Public Information officers.
7. Information as on 2019-20 is published under Section 4(1) (a) and 4(1) (b) of the Right to Information Act.
8. The citizen charter.

The public can send their queries/complaints if any to our E-mail ID viz. mc.bmrda@ka.gov.in

The periodic updating of the website has reduced the number of visitors to the Authority office and enabled the general public to get the details about the status of the projects and other relevant details in a transparent and speedy manner.

## 12. Staff Position:

The sanctioned staff strength for the Authority as on the 31.03.2020 is 47, out of this, only 22 posts have been filled up and the remaining 25 posts are vacant.

In addition to the above posts Government has sanctioned 12 temporary posts on temporary basis for a period of 1 year. These posts have to be filled through deputation only. During the period of report two post of Joint Director, three posts of Assistant Director and seven posts of Town Planner of Town & Country Planning department. The details of officers and staff working against the sanctioned posts and the details of vacant posts are placed at **Annexure- 1**.

## 13. Budget:

For the year 2020-21 the Authority has not been taken any Grants from the Government.

For the said year, the projects and administration of the Authority is made out of the Internal Financial Resources.

Statement of expenditure and income for the year 2020-21 [from 01-04-2020 to 31-03-2021] is shown in **Annexure - 2** and **Annexure -3** respectively.

Sd/-
Metropolitan Commissioner,
Bangalore Metropolitan Region
Development Authority, Bangalore.

## ಅನುಬಂಧ–1

ದಿನಾಂಕ: 01–04–2020 ರಿಂದ 31–03–2021 ರವರೆಗಿನ ಅವಧಿಯಲ್ಲಿ ಈ ಪ್ರಾಧಿಕಾರದಲ್ಲಿ ಸೇವೆ ಸಲ್ಲಿಸಿರುವ ಅಧಿಕಾರಿಗಳ/ಸಿಬ್ಬಂದಿಗಳ ವಿವರಗಳು:

| ಕ್ರ. ಸಂ. | ಅಧಿಕಾರಿ/ಸಿಬ್ಬಂದಿಗಳ ಹೆಸರು (ಶ್ರೀ/ ಶ್ರೀಮತಿ) | ಪದನಾಮ | ಸೇವೆ ಸಲ್ಲಿಸಿರುವ ಅವಧಿ | | ಪ್ರಾಧಿಕಾರದ/ ಇಲಾಖಾ ನಿಯೋಜನೆ |
|---|---|---|---|---|---|
| | | | ಇಂದ | ವರೆಗೆ | |
| 1 | 2 | 3 | 4 | 5 | 6 |
| 1 | ವಿ.ಪಿ.ಇಕ್ಕೇರಿ, IAS | ಮಹಾನಗರ ಆಯುಕ್ತರು | 12.09.2019 | 30.06.2020 | ಡಿ.ಪಿ.ಎ.ಆರ್. |
| | ಪಿ. ವಸಂತಕುಮಾರ್, IAS | ಮಹಾನಗರ ಆಯುಕ್ತರು | 01.07.2020 | 17.11.2020 | ಡಿ.ಪಿ.ಎ.ಆರ್. |
| | ಗಿರೀಶ್ .ಸಿ. ಹೊಸೂರ್, IFS | ಮಹಾನಗರ ಆಯುಕ್ತರು | 17.11.2020 | ಈವರೆಗೆ | ಡಿ.ಪಿ.ಎ.ಆರ್. |
| 2 | ಎನ್.ಕೆ. ತಿಪ್ಪೇಸ್ವಾಮಿ | ಮಹಾನಗರ ಯೋಜಕರು | 31.05.2019 | ಈವರೆಗೆ | ಡಿ.ಪಿ.ಎ.ಆರ್. |
| | ಖಾಲಿ | ಹೆಚ್ಚುವರಿ ಮಹಾನಗರ ಆಯುಕ್ತರು | – | – | – |
| 3 | ಧನಂಜಯ ರೆಡ್ಡಿ .ಎನ್.ವಿ | ಹೆಚ್ಚುವರಿ ನಿರ್ದೇಶಕರು | 08.09.2017 | 20.03.2021 | ನಗರ ಯೋಜನಾ ಇಲಾಖೆ |
| | ಗೋಪಾಲಕೃಷ್ಣ .ಎಸ್ | ಹೆಚ್ಚುವರಿ ನಿರ್ದೇಶಕರು (ಪ್ರ) | 22.03.2021 | ಈವರೆಗೆ | ನಗರ ಯೋಜನಾ ಇಲಾಖೆ |
| 4 | ಆರ್. ಶಾಲಿನಿ, ಕೆ.ಎಂ.ಎ.ಎಸ್ | ಜಂಟಿ ಮಹಾನಗರ ಆಯುಕ್ತರು | 15.07.2019 | ಈವರೆಗೆ | ಡಿ.ಪಿ.ಎ.ಆರ್. |
| 5 | ವಿಜಯ ಈ ರವಿಕುಮಾರ್, ಕೆ.ಎ.ಎಸ್ | ಉಪ ಮಹಾನಗರ ಆಯುಕ್ತರು | 11.06.2019 | 21.12.2020 | ಡಿ.ಪಿ.ಎ.ಆರ್. |
| | ಖಾಲಿ | ಉಪ ಮಹಾನಗರ ಆಯುಕ್ತರು | – | – | – |
| 6 | ಗೋಪಾಲಕೃಷ್ಣ .ಎಸ್ | ಜಂಟಿ ನಿರ್ದೇಶಕರು | 17.01.2019 | ಈವರೆಗೆ | ನಗರ ಯೋಜನಾ ಇಲಾಖೆ |
| | ಬಿ.ಆರ್. ನಟರಾಜ್‌ಶೆಟ್ಟಿ (ತಾತ್ಕಾಲಿಕ ಹುದ್ದೆ) | ಜಂಟಿ ನಿರ್ದೇಶಕರು | 28.11.2019 | ಈವರೆಗೆ | ನಗರ ಯೋಜನಾ ಇಲಾಖೆ |
| 7 | ನಂದಿನಿ .ಪಿ.ಎಂ, ಕೆ.ಎ.ಎಸ್ | ಸಹಾಯಕ ಮಹಾನಗರ ಆಯುಕ್ತರು | 12.09.2019 | 14.10.2020 | ಡಿ.ಪಿ.ಎ.ಆರ್. |
| | ತೇಜಸ್ ಕುಮಾರ್. ಎನ್, ಕೆ.ಎ.ಎಸ್ | ಸಹಾಯಕ ಮಹಾನಗರ ಆಯುಕ್ತರು | 14.12.2020 | ಈವರೆಗೆ | ಡಿ.ಪಿ.ಎ.ಆರ್. |
| 8 | ದೇವರಾಜ .ಎಸ್.ಎಂ, ಕೆ.ಎಸ್.ಎ.ಎಸ್ | ಲೆಕ್ಕಾಧಿಕಾರಿಗಳು | 17.10.2019 | ಈವರೆಗೆ | ರಾಜ್ಯ ಲೆಕ್ಕಪತ್ರ ಇಲಾಖೆ |

| | | | | | |
|---|---|---|---|---|---|
| 9 | ರಾಘವೇಂದ್ರ .ಸಿ.ಎಸ್ | ಉಪ ನಿರ್ದೇಶಕರು | 18.11.2019 | ಈವರೆಗೆ | ನಗರ ಯೋಜನಾ ಇಲಾಖೆ |
| 10 | ಖಾಲಿ | ಕಾನೂನು ಅಧಿಕಾರಿ | – | – | – |
| 11 | ಡಿ. ಪಾಂಡುರಂಗ | ತಹಶೀಲ್ದಾರ್ | 08.12.2014 | ಈವರೆಗೆ | ಕಂದಾಯ ಇಲಾಖೆ |
| 12 | ಶಂಕರಪ್ಪ .ಎಂ (ತಾತ್ಕಾಲಿಕ ಹುದ್ದೆ) | ಸಹಾಯಕ ನಿರ್ದೇಶಕರು | 28.09.2017 | ಈವರೆಗೆ | ನಗರ ಯೋಜನಾ ಇಲಾಖೆ |
| | ಮೋಹನ್ .ಎಂ (ತಾತ್ಕಾಲಿಕ ಹುದ್ದೆ) | ಸಹಾಯಕ ನಿರ್ದೇಶಕರು | 02.03.2019 | ಈವರೆಗೆ | ನಗರ ಯೋಜನಾ ಇಲಾಖೆ |
| | ಶಿವಪ್ರಸಾದ್ .ವಿ (ತಾತ್ಕಾಲಿಕ ಹುದ್ದೆ) | ಸಹಾಯಕ ನಿರ್ದೇಶಕರು | 11.08.2017 | 15.06.2020 | ನಗರ ಯೋಜನಾ ಇಲಾಖೆ |
| | ಬಿ.ಎನ್. ಶೋಭ | ಸಹಾಯಕ ನಿರ್ದೇಶಕರು | 02.12.2019 | ಈವರೆಗೆ | ನಗರ ಯೋಜನಾ ಇಲಾಖೆ |
| | ಶೀಲಾರಾಣಿ .ವಿ (ತಾತ್ಕಾಲಿಕ ಹುದ್ದೆ) | ನಗರ ಯೋಜಕರು | 09.02.2015 | ಈವರೆಗೆ | ನಗರ ಯೋಜನಾ ಇಲಾಖೆ |
| | ಚಂದ್ರಿಕಾ ಶಿರಹಳ್ಳಿ (ತಾತ್ಕಾಲಿಕ ಹುದ್ದೆ) | ನಗರ ಯೋಜಕರು | 29.09.2016 | ಈವರೆಗೆ | ನಗರ ಯೋಜನಾ ಇಲಾಖೆ |
| | ಎಂ. ರಚನಾ (ತಾತ್ಕಾಲಿಕ ಹುದ್ದೆ) | ನಗರ ಯೋಜಕರು | 03.10.2016 | ಈವರೆಗೆ | ನಗರ ಯೋಜನಾ ಇಲಾಖೆ |
| 13 | ಖಾಲಿ | ಆಕೃತಿ ರಚಕ | – | – | – |
| 14 | ಖಾಲಿ | ಮಾಡಲ್ ಮೇಕರ್ | – | – | – |
| 15 | ಖಾಲಿ (ನಾಲ್ಕು ಹುದ್ದೆಗಳು) | ಪ್ರ.ದ.ಸ. | – | – | – |
| 16 | ಅರ್ಚನಾ ಕಟ್ಟಿಮನಿ | ಶೀಘ್ರಲಿಪಿಗಾರರು | 22.03.2018 | ಈವರೆಗೆ | ಬಿಎಂಆರ್‌ಡಿಎ |
| 17 | ಖಾಲಿ (ಐದು ಹುದ್ದೆಗಳು) | ಶೀಘ್ರಲಿಪಿಗಾರರು | – | – | – |
| 18 | ಎನ್.ಪಿ. ಶ್ವೇತ | ದ್ವಿ.ದ.ಸ. | 23.12.2011 | ಈವರೆಗೆ | ಕಂದಾಯ ಇಲಾಖೆ |
| 19 | ಶ್ರೀಕಾಂತ್ .ಹೆಚ್.ವಿ | ದ್ವಿ.ದ.ಲೆ.ಸ. | 04.07.2018 | 02.06.2020 | ರಾಜ್ಯ ಲೆಕ್ಕಪತ್ರ ಇಲಾಖೆ |
| 20 | ಹೆಚ್. ಅನಿತ | ದ್ವಿ.ದ.ಸ. | 26.06.2014 | ಈವರೆಗೆ | ಕಂದಾಯ ಇಲಾಖೆ |
| 21 | ಹೆಚ್.ಡಿ. ಆನಂದಯ್ಯ | ದ್ವಿ.ದ.ಸ. | 28.01.2015 | ಈವರೆಗೆ | ಬಿಎಂಆರ್‌ಡಿಎ |
| 22 | ವೆಂಕಟೇಶ್ | ದ್ವಿ.ದ.ಸ. | 28.01.2015 | ಈವರೆಗೆ | ಬಿಎಂಆರ್‌ಡಿಎ |
| 23 | ಮೌಲಾನ | ದ್ವಿ.ದ.ಸ. | 30.03.2015 | ಈವರೆಗೆ | ಬಿಎಂಆರ್‌ಡಿಎ |
| 24 | ಸಂಜಯ ಕುಮಾರ್ | ಬೆರಳಚ್ಚುಗಾರರು | 23.04.2018 | ಈವರೆಗೆ | ಬಿಎಂಆರ್‌ಡಿಎ |

| | | | | | |
|---|---|---|---|---|---|
| 29 | ಖಾಲಿ (ನಾಲ್ಕು ಹುದ್ದೆಗಳು) | ಬೆರಳಚ್ಚುಗಾರರು | -- | -- | -- |
| 30 | ಖಾಲಿ | ಅನುರೇಖಕ | -- | -- | -- |
| 31 | ಆರ್. ರಾಜಶೇಖರ್ | ವಾಹನ ಚಾಲಕರು | 24.05.1993 | ಈವರೆಗೆ | ಬಿಎಂಆರ್‌ಡಿಎ |
| 32 | ಶಂಕುನಾಥ್ | ವಾಹನ ಚಾಲಕರು | 15.03.2018 | ಈವರೆಗೆ | ಬಿಎಂಆರ್‌ಡಿಎ |
| 33 | ಖಾಲಿ (ಮೂರು ಹುದ್ದೆಗಳು) | ವಾಹನ ಚಾಲಕರು | -- | -- | -- |
| 34 | ಗಂಗಮ್ಮ | ಡಿ ಗ್ರೂಪ್ | 29.01.1994 | ಈವರೆಗೆ | ಬಿಎಂಆರ್‌ಡಿಎ |
| 35 | ಸಿದ್ಧಲಿಂಗಯ್ಯ | ಡಿ ಗ್ರೂಪ್ | 12.03.2018 | ಈವರೆಗೆ | ಬಿಎಂಆರ್‌ಡಿಎ |
| 36 | ಖಾಲಿ (ಏಳು ಹುದ್ದೆಗಳು) | ಡಿ ಗ್ರೂಪ್ | -- | -- | -- |

**ಟಿಪ್ಪಣಿ :** ಈ ಪ್ರಾಧಿಕಾರದಲ್ಲಿ ಒಟ್ಟು 47 ಹುದ್ದೆಗಳು ಮಂಜೂರಾತಿ ಹುದ್ದೆಗಳಿದ್ದು, ಈ ಪೈಕಿ ಖಾಲಿ ಇರುವ ಹುದ್ದೆಗಳಿಗೆ Keonics ಹೊರ ಗುತ್ತಿಗೆ ಆಧಾರದಿಂದ (Outsource) ಒಂಭತ್ತು ಡಾಟಾ ಎಂಟ್ರಿ ಆಪರೇಟರ್ಸ್, ಎರಡು ವಾಹನ ಚಾಲಕರು, ನಾಲ್ಕು ಕಾವಲುಗಾರರು ಮತ್ತು ಏಳು 'ಡಿ ಗ್ರೂಪ್' ನೌಕರರುಗಳ ಸೇವೆಯನ್ನು ಪಡೆಯಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ನಅಇ/208/ಬಿಎಂಆರ್/2020, ದಿನಾಂಕ: 10.11.2020ರಂತೆ ತಾಂತ್ರಿಕ ಹಾಗೂ ತಾಂತ್ರಿಕೇತರ ಹುದ್ದೆಗಳನ್ನು ತಾತ್ಕಾಲಿಕವಾಗಿ ಎರಡು ವರ್ಷದ ಅವಧಿಗೆ ನಿಯೋಜನೆ ಮೇರೆಗೆ ಭರ್ತಿ ಮಾಡುವ ಬಗ್ಗೆ ಸರ್ಕಾರಿ ಆದೇಶವಾಗಿದ್ದು, ಅದರ ಪಟ್ಟಿ ಕೆಳಕಂಡಂತಿದೆ.

| ಕ್ರ. ಸಂ. | ಬಿಎಂಆರ್‌ಡಿಎ ಪ್ರಾಧಿಕಾರದ ಶಾಖೆಗೆ ಮಂಜೂರಾದ ಹುದ್ದೆಗಳು | ಹುದ್ದೆಯ ಹೆಸರು | ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ |
|---|---|---|---|
| 1 | 02 | ಜಂಟಿ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ | 02 |
| 2 | 03 | ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ | 02 |
| 3 | 07 | ನಗರ ಯೋಜಕರು, ನಗರ ಮತ್ತು ಗ್ರಾಮಾಂತರ ಯೋಜನೆ | 03 |
| 4 | **12** | **ಒಟ್ಟು ಹುದ್ದೆಗಳು** | **07** |

ಮೇಲ್ಕಂಡ 12 ತಾತ್ಕಾಲಿಕ ಹುದ್ದೆಗಳ ಪೈಕಿ (2) ಜಂಟಿ ನಿರ್ದೇಶಕರ ಹುದ್ದೆಗೆ ಶ್ರೀ ಗೋಪಾಲಕೃಷ್ಣ .ಎಸ್ ಮತ್ತು ಶ್ರೀ ಬಿ.ಆರ್. ನಟರಾಜಶೆಟ್ಟಿ, (2) ಸಹಾಯಕ ನಿರ್ದೇಶಕರ ಹುದ್ದೆಗೆ ಶ್ರೀ ಶಂಕರಪ್ಪ .ಎಂ ಮತ್ತು ಶ್ರೀ ಮೋಹನ್ .ಎಂ, (3) ನಗರ ಯೋಜಕರ ಹುದ್ದೆಗೆ ಶ್ರೀಮತಿ ಶೀಲಾರಾಣಿ .ವಿ, ಶ್ರೀಮತಿ ಚಂದ್ರಿಕಾ ಶಿರಹಳ್ಳಿ, ಕುಮಾರಿ: ಎಂ. ರಚನಾ, ನಗರ ಯೋಜನಾ ಇಲಾಖೆಯಿಂದ ನಿಯೋಜನೆಗೊಂಡು ಕೆಲಸ ನಿರ್ವಹಿಸುತ್ತಿದ್ದಾರೆ.

## ಅನುಬಂಧ–2

**ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇಲ್ಲಿ 2020–21 ನೇ ಸಾಲಿನ ಮಾಸಿಕವಾರು ವೆಚ್ಚದ ವಿವರಗಳ ತಃಖ್ತೆ (01–04–2020 ರಿಂದ 31.03.2021 ರವರೆಗೆ)**
**(ಲೆಕ್ಕಪರಿಶೋಧನೆಗೆ ಒಳಪಟ್ಟಿರುವುದಿಲ್ಲ)**

(ರೂ.ಗಳಲ್ಲಿ)

| ಕ್ರ ಸಂ | ತಿಂಗಳು/ವರ್ಷ | ವೇತನ ಮತ್ತು ಭತ್ಯೆಗಳು | ನಿವೃತ್ತಿ ವೇತನ & ರಜಾ ವಂತಿಗೆ | ಹೊರಗುತ್ತಿಗೆ ವೆಚ್ಚ | ಪ್ರವಾಸ ಭತ್ಯೆ | ಕಛೇರಿ ವೆಚ್ಚ | ದೂರವಾಣಿ ವೆಚ್ಚ | ವಿದ್ಯುಚ್ಛಕ್ತಿ ವೆಚ್ಚ | ನೀರಿನ ವೆಚ್ಚ | ವಾಹನಗಳ ವೆಚ್ಚ | ಇತರೆ | ಯೋಜನಾ ವೆಚ್ಚ | ವರಮಾನ ತೆರಿಗೆ | ಮುಖ್ಯಮಂತ್ರಿಗಳ ಪರಿಹಾರ ನಿಧಿ | ಒಟ್ಟು |
|---|---|---|---|---|---|---|---|---|---|---|---|---|---|---|---|
| **1** | **2** | **3** | **4** | **5** | **6** | **7** | **8** | **9** | **10** | **11** | **12** | **13** | **14** | **15** | **16** |
| 1 | ಏಪ್ರಿಲ್–2020 | 2044462 | 0 | 501172 | 0 | 0 | 0 | 0 | 0 | 0 | 0 | 0 | 0 | 0 | 2545634 |
| 2 | ಮೇ–2020 | 2172595 | 0 | 970592 | 0 | 74864 | 34693 | 56609 | 38925 | 427675 | 100185 | 0 | 0 | 72343 | 3948481 |
| 3 | ಜೂನ್–2020 | 2139606 | 0 | 836175 | 0 | 257433 | 28606 | 36520 | 825 | 56294 | 49503 | 0 | 0 | 0 | 3404962 |
| 4 | ಜುಲೈ–2020 | 1879150 | 0 | 950403 | 0 | 151481 | 1536 | 40281 | 25025 | 144852 | 20029681 | 0 | 0 | 0 | 23222409 |
| 5 | ಆಗಸ್ಟ್–2020 | 1776742 | 0 | 871351 | 0 | 193140 | 32795 | 55970 | 0 | 86053 | 85454 | 0 | 0 | 0 | 3101505 |
| 6 | ಸೆಪ್ಟೆಂಬರ್–2020 | 2867934 | 0 | 901118 | 0 | 50717 | 19213 | 8306 | 49847 | 15036 | 230450 | 0 | 0 | 0 | 4142621 |
| 7 | ಅಕ್ಟೋಬರ್–2020 | 1811987 | 0 | 542758 | 0 | 5893 | 0 | 35547 | 17610 | 57727 | 100755 | 0 | 0 | 0 | 2572277 |
| 8 | ನವೆಂಬರ್–2020 | 1569472 | 0 | 814307 | 0 | 10710 | 16170 | 32356 | 0 | 75822 | 48143 | 0 | 0 | 0 | 2566980 |
| 9 | ಡಿಸೆಂಬರ್–2020 | 1278060 | 2026762 | 1151831 | 0 | 299851 | 33917 | 38342 | 107548 | 157140 | 40685 | 0 | 0 | 0 | 5134136 |
| 10 | ಜನವರಿ–2021 | 1212415 | 0 | 811754 | 0 | 196531 | 17765 | 32465 | 46351 | 73054 | 45545 | 0 | 0 | 0 | 2435880 |
| 11 | ಫೆಬ್ರವರಿ–2021 | 1748240 | 0 | 856700 | 0 | 179429 | 15861 | 32567 | 32944 | 95810 | 30380 | 0 | 0 | 0 | 2991931 |
| 12 | ಮಾರ್ಚ್–2021 | 1539966 | 0 | 829041 | 0 | 36207 | 17709 | 32117 | 38495 | 191951 | 640100723 | 0 | 0 | 0 | 642786209 |
| | **ಒಟ್ಟು** | **22040629** | **2026762** | **10037202** | **0** | **1456256** | **218265** | **401080** | **357570** | **1381414** | **660861504** | **0** | **0** | **72343** | **698853025** |

**(ರೂಪಾಯಿ ಅರವತ್ತೊಂಬತ್ತು ಕೋಟಿ ಎಂಭತ್ತೆಂಟು ಲಕ್ಷದ ಐವತ್ತಮೂರು ಸಾವಿರದ ಇಪ್ಪತ್ತೈದು ಮಾತ್ರ)**

## ಅನುಬಂಧ-3

### ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರಕ್ಕೆ 2020-21 ನೇ ಸಾಲಿನಲ್ಲಿ ವಿವಿಧ ಮೂಲಗಳಿಂದ ಬಂದ ಸ್ವೀಕೃತಿಗಳ ವಿವರ
(ದಿನಾಂಕ : 01-04-2020 ರಿಂದ 31.03.2021ರವರೆಗೆ)
(ಲೆಕ್ಕಪರಿಶೋಧನೆಗೆ ಒಳಪಟ್ಟಿರುವುದಿಲ್ಲ)

(ರೂ.ಗಳಲ್ಲಿ)

| ಕ್ರ ಸಂ | ತಿಂಗಳು/ವರ್ಷ | ನಕ್ಷೆ/ಬಡಾವಣೆ ಇತರೆ ಅನುಮೋದನೆ ಶುಲ್ಕ | ಕೆರೆ ಸಂರಕ್ಷಣಾ ಶುಲ್ಕ | ನಿಶ್ಚಿತ ಠೇವಣಿ/ಉಳಿತಾಯ ಖಾತೆ/Sweep in ಖಾತೆಯಿಂದ ಬಂದ ಬಡ್ಡಿ | ಇತರೆ | ಒಟ್ಟು |
|---|---|---|---|---|---|---|
| **1** | **2** | **3** | **4** | **5** | **6** | **7** |
| 1 | ಏಪ್ರಿಲ್-2020 | 0 | 0 | 222054 | 0 | 222054 |
| 2 | ಮೇ-2020 | 0 | 0 | 1093445 | 0 | 1093445 |
| 3 | ಜೂನ್-2020 | 0 | 0 | 113371 | 0 | 113371 |
| 4 | ಜುಲೈ-2020 | 0 | 0 | 215939 | 0 | 215939 |
| 5 | ಆಗಸ್ಟ್-2020 | 0 | 0 | 13872 | 119 | 13991 |
| 6 | ಸೆಪ್ಟೆಂಬರ್-2020 | 0 | 0 | 1224620 | 0 | 1224620 |
| 7 | ಅಕ್ಟೋಬರ್-2020 | 0 | 0 | 16712585 | 3658 | 16716243 |
| 8 | ನವೆಂಬರ್-2020 | 0 | 0 | 133820 | 0 | 133820 |
| 9 | ಡಿಸೆಂಬರ್-2020 | 2577550 | 0 | 153898 | 0 | 2731448 |
| 10 | ಜನವರಿ-2021 | 0 | 0 | 42139 | 0 | 42139 |
| 11 | ಫೆಬ್ರವರಿ-2021 | 143000 | 0 | 0 | 0 | 143000 |
| 12 | ಮಾರ್ಚ್-2021 | 750000 | 0 | 0 | 0 | 750000 |
| | **ಒಟ್ಟು** | **3470550** | **0** | **19925743** | **3777** | **23400070** |

(ರೂಪಾಯಿ ಎರಡು ಕೋಟಿ ಮೂವತ್ತನಾಲ್ಕು ಲಕ್ಷದ ಎಪ್ಪತ್ತು ಮಾತ್ರ)